**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 254 |
| ಸದಸ್ಯರ ಹೆಸರು | : | ಶ್ರೀ ಸುನೀಲ್‌ಗೌಡ ಪಾಟೀಲ್ (ಸಂಸ್ಥೆಗಳ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 12.08.2025 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| | ಪ್ರಶ್ನೆ | ಉತ್ತರ |
|---|---|---|
| ಅ) | ಆಸ್ತಿ ತೆರಿಗೆ ಸಂಗ್ರಹಣೆಯನ್ನು ಸರಳೀಕರಿಸುವ ನಿಟ್ಟಿನಲ್ಲಿ ಬಿ.ಬಿ.ಎಂ.ಪಿ. ಮಾದರಿಯಲ್ಲಿ ಒಂದು ಬಾರಿ ಪರಿಹಾರ (ಓ.ಟಿ.ಎಸ್.) ಯೋಜನೆಯನ್ನು ಇತರೆ ಮಹಾನಗರ ಪಾಲಿಕೆಗಳಲ್ಲಿ ಜಾರಿಗೊಳಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ: ಈ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು: | • ರಾಜ್ಯದ ಮಹಾನಗರ ಪಾಲಿಕೆಗಳಿಗೆ (ಬಿ.ಬಿ.ಎಂ.ಪಿ. ಹೊತುಪಡಿಸಿ) ಸ್ವಂತ ನಿಧಿ ಹೊರತು ಪಡಿಸಿ, ರಾಜ್ಯ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳು, ರಾಜ್ಯ ಮತ್ತು ಕೇಂದ್ರ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಅನುದಾನಗಳನ್ನು ಒದಗಿಸಲಾಗಿರುತ್ತದೆ.<br>• ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಬಾಕಿ ತೆರಿಗೆ ವಸೂಲಿಗೆ ಸ್ತ್ರೀ ಶಕ್ತಿ ಸಂಘಗಳನ್ನು ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.<br>• ದಿನಾಂಕ: 30.03.2025ರ ವರೆಗೆ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ 2024-25ನೇ ಸಾಲಿನ ಒಟ್ಟು ಬೇಡಿಕೆಯ ಶೇ. 91.28 ರಷ್ಟು ಆಸ್ತಿ ತೆರಿಗೆ ವಸೂಲಿಯಾಗಿರುತ್ತದೆ.<br>• 2025-26ನೇ ಸಾಲಿನ ಆಸ್ತಿ ತೆರಿಗೆ ಪಾವತಿಸಲು ಶೇ.5 ರಷ್ಟು ರಿಯಾಯಿತಿಯನ್ನು ದಿನಾಂಕ:30.06.2025ರ ವರೆಗೆ ವಿಸ್ತರಿಸಿ ಆದೇಶಿಸಲಾಗಿರುತ್ತದೆ.<br>• ಆದಾಗ್ಯೂ One time Settlement ಯೋಜನೆಯನ್ನು ಅನುಷ್ಠಾನಗೊಳಿಸಿದ್ದಲ್ಲಿ ಬಾಕಿ ಆಸ್ತಿ ತೆರಿಗೆ ಪಾವತಿಸಲು ದಂಡದ ಮೊತ್ತಕ್ಕೆ ವಿನಾಯಿತಿ ನೀಡುವುದರಿಂದ, ಸ್ಥಳೀಯ ಸಂಸ್ಥೆಗಳಿಗೆ ಬರುವ ಆದಾಯ ಕಡಿಮೆಯಾಗಿ ಅಭಿವೃದ್ಧಿ ಕಾರ್ಯಗಳಿಗೆ ಧಕ್ಕೆ ಉಂಟಾಗುವ ಸಾಧ್ಯತೆಗಳಿರುವುದರಿಂದ One Time Settlement ಯೋಜನೆಯನ್ನು ಜಾರಿ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ. |
| ಆ) | ಮಹಾನಗರ ಪಾಲಿಕೆಗಳಲ್ಲಿ ಬಹಳ ವರ್ಷಗಳಿಂದ ಆಸ್ತಿ ತೆರಿಗೆ ಪಾವತಿಸದೆ ತೆರಿಗೆ ಬಾಕಿದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಪಾಲಿಕೆಗಳಿಗೆ ಆರ್ಥಿಕ ಹೊರೆಯಾಗಿ ಆದಾಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಬಾಕಿ ತೆರಿಗೆ ವಸೂಲಿಗೆ ಸರ್ಕಾರ ಕೈಗೊಂಡ ಕ್ರಮಗಳೇನು: | |
| ಇ) | ವಿಜಯಪುರ ಮಹಾನಗರ ಪಾಲಿಕೆಯ ಒಟ್ಟು ತೆರಿಗೆ ಬೇಡಿಕೆ ಎಷ್ಟು: ವಸೂಲಿಯಾದ ತೆರಿಗೆ ಎಷ್ಟು: ಮತ್ತು ಬಾಕಿ ಇರುವ ತೆರಿಗೆ ಎಷ್ಟು (ವಿವರವಾದ ಮಾಹಿತಿ ನೀಡುವುದು)? | ವಿಜಯಪುರ ಮಹಾನಗರ ಪಾಲಿಕೆಯ ಒಟ್ಟು ತೆರಿಗೆ ಬೇಡಿಕೆ, ವಸೂಲಿಯಾದ ತೆರಿಗೆ ಮತ್ತು ಬಾಕಿ ಇರುವ ತೆರಿಗೆ ವಿವರಗಳು ಈ ಕೆಳಕಂಡಂತಿದೆ. |

**(ರೂ. ಲಕ್ಷಗಳಲ್ಲಿ)**

| ವರ್ಷ | ಹಿಂದಿನ ಬಾಕಿ | ಚಾಲ್ತಿ ಸಾಲಿನ ಬೇಡಿಕೆ | ಒಟ್ಟು ಬೇಡಿಕೆ | ಒಟ್ಟು ವಸೂಲಿ | ಒಟ್ಟು ಬಾಕಿ |
|---|---|---|---|---|---|
| **2024-25** | 309.41 | 3681.20 | 3990.61 | 3665.43 | 325.18 |
| **2025-26 (ಜುಲೈ ವರೆಗೆ** | 325.18 | 4063.00 | 4388.18 | 2822.11 | 1566.07 |

**ಸಂಖ್ಯೆ: ನಅಇ 241 ಎಂಎನ್‌ಇ 2025 (ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ
ಯೋಜನಾ ಸಚಿವರು